# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3458 / 2023

**ಚಾಸಾ ಃ– 02 / ಪ್ರಾಸಾ ಃ– 01**

| | |
|---|---|
| ಹೆಸರು | ಮುಡ್ಲಯ್ಯ |
| ತಂದೆ ಹೆಸರು | ನಂಜಯ್ಯ |
| ವಯಸ್ಸು | 54 |
| ಉದ್ಯೋಗ | ವ್ಯವಸಾಯ |
| ವಿಳಾಸ | ಕೊಟ್ಟಗಾರನಹಳ್ಳಿ |

**ದಿನಾಂಕಃ 31.01.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ– **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ–

ಚಾಸಾ–1 ರವರು ಪರಿಚಯ ಇರುವುದಿಲ್ಲ. ಆರೋಪಿಯನ್ನು ನೋಡಿರುತ್ತೇನೆ. ಸುಮಾರು 1 ವರ್ಷದ ಹಿಂದೆ ಕೊಟ್ಟಗಾರಹಳ್ಳಿ ಕೃಷ್ಣಾಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ವಜ್ರಪ್ಪ ರವರ ಜಮೀನಿನ ಹತ್ತಿರ ಅಪಘಾತವಾದ ದಿನ ಆರೋಪಿಯನ್ನು ನೋಡಿರುತ್ತೇನೆ. ಕೆ ಎಸ್ ಆರ್ ಟಿ ಸಿ ಬಸ್ ಹಾಗೂ ಸ್ಕೂಟರ್ ಮಧ್ಯೆ ಅಪಘಾತವಾಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಬಸ್ ಮತ್ತು ಸ್ಕೂಟರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವ ಬಸ್ ಮತ್ತು ದ್ವಿಚಕ್ರ ವಾಹನವನ್ನು ನೋಡಿ ಗುರುತಿಸಿದ್ದು ಪೋಟೋವನ್ನು ಕ್ರಮವಾಗಿ ನಿಪಿ–1 ಮತ್ತು 2 ಎಂದು ಗುರುತಿಸಲಾಯಿತು. ಅಪಘಾತ ಸಂಬಂಧ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ– ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ–**

ದಿನಾಂಕ 10.03.2023 ರಂದು ಸಂಜೆ 4.15 ಗಂಟೆ ವೇಳೆಯಲ್ಲ ನೀವು ಕೃಷ್ಣಾಂಜನೇಯ ದೇವಸ್ಥಾನದ ಬಳಿ ವಾಕಿಂಗ್ ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಂಜೆ 4.20 ಗಂಟೆಯಲ್ಲಿ ನಿಮ್ಮ ಊರಿನ ಕಡೆಯಿಂದ ಜಾಲಮಂಗಲ ಕಡೆಗೆ ಕೆಎ 41 ಇಎಫ್ 1978 ಸ್ಕೂಟರ್ ನಲ್ಲಿ ಒಬ್ಬರು ರಸ್ತೆಯ ಎಡಮಾರ್ಗದಲ್ಲಿ ಹೋಗುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ರಾಮನಗರ ಜಾಲಮಂಗಲ ಕಡೆಯಿಂದ ಒಂದು ಕೆಎಸ್ ಆರ್ ಟಿ ಸಿ ಬಸ್ಸು ಅತಿವೇಗವಾಗಿ ಬರುತ್ತ ಅದರ ಚಾಲಕನು ರಸ್ತೆಯ ಸ್ವಲ್ಪ ಬಲಬದಿಗೆ ಚಾಲನೆ ಮಾಡಿ ಎದುರುಗಡೆಯಿಂದ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿದಾಗ ದ್ವಿಚಕ್ರ ವಾಹನದಲ್ಲಿದ್ದ ವ್ಯಕ್ತಿಯು ಎಗರಿ ಬಸ್ಸಿಗೆ ಡಿಕ್ಕಿ ಹೊಡೆಸಿಕೊಂಡು ಕೆಳಗೆ ಬಿದ್ದಿರುತ್ತಾನೆ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಬಸ್ ಚಾಲಕನು ಬಸ್ಸನ್ನು ರಸ್ತೆಯ ಎಡಭಾಗಕ್ಕೆ ತಂದು ನಿಲ್ಲಿಸಿದನು ಅಲ್ಲೇ ಇದ್ದ ನೀವು ತಕ್ಷಣ ಹೋಗಿನೋಡಲಾಗಿ ಆ ವ್ಯಕ್ತಿಯ ತಲೆ , ಮೈ ಕೈ ಕಾಲುಗಳಿಗೆ ತೀವ್ರ ತರದ ಏಟುಗಳಾಗಿ ಸ್ಥಳದಲ್ಲಿ ಮೃತನಾಗಿದ್ದನು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೃತನ ಹೆಸರು ತಿಳಿಯಲಾಗಿ ಪ್ರಸಾದ್ ಕೆ ಎಸ್, ಕೆಂಗೇರಿ ಎಂದು ಗೊತ್ತಾಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಪಘಾತ ಪಡಿಸಿದ ಬಸ್ ನಂಬರ್ ನೋಡಲಾಗಿ ಕೆಎ 42 ಎಫ್ 2076 ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬಸ್ ಚಾಲಕನ ಹೆಸರು ತಿಳಿಯಲಾಗಿ

ದಸ್ತಗಿರ್ ಸಾಬ್ ಎಂದು ಗೊತ್ತಾಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಂಚಾರದ ದೃಷ್ಟಿಯಿಂದ ಅಪಘಾತಕ್ಕೆ ಒಳಗಾದ ಬಸ್ ಮತ್ತು ದ್ವಿಚಕ್ರ ವಾಹನವನ್ನು ಮಾಗಡಿ ಪೋಲಿಸ್ ಠಾಣೆಯ ಬಳಿ ಕಳುಹಿಸಿದೆವು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೃತ ವ್ಯಕ್ತಿಯ ಶವವನ್ನು ಮಾಗಡಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಆಂಬುಲೆನ್ಸ್ ನಲ್ಲಿ ಕಳುಹಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಪಘಾತದ ವಿಚಾರವನ್ನು ಸ್ಥಳದಲ್ಲಿದ್ದ ನಮ್ಮ ಊರಿನವರೇ ಯಾರೋ ಒಬ್ಬರು ಮೃತನ ಮಗ ನಾಗೇಂದ್ರ ಪ್ರಸಾದ್ ಎಂಬುವವರಿಗೆ ಅಪಘಾತದ ವಿಚಾರವನ್ನು ಪೋನ್ ಮಾಡಿ ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಂತರ ನಾಗೇಂದ್ರ ಪ್ರಸಾದ್ ರವರು ಅಪಘಾತದ ಬಗ್ಗೆ ಮಾಗಡಿ ಪೋಲಿಸ್ ಠಾಣೆಗೆ ದೂರು ಕೊಟ್ಟ ಬಗ್ಗೆ ಗೊತ್ತಾಯಿತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.ಅಪಘಾತವು ಕೆಎ 42– ಎಫ್ 2076 ಸರ್ಕಾರಿ ಬಸ್ಸಿನ ಚಾಲಕನಾದ ದಸ್ತಗಿರ್ ಸಾಬ್ ಮೇಲೆ ಕಾನೂನು ಕ್ರಮ ಜರುಗಿಸಲು ದಿನಾಂಕ 12.03.2023 ರಂದು ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಪಘಾತ ನಡೆದ ಈಗ ಒಂದುವರೆ ವರ್ಷ ಆದ ಕಾರಣ ಅಪಘಾತದ ದಿನಾಂಕ ಮತ್ತು ವಾಹನದ ಸಂಖ್ಯೆಯನ್ನು ಮರೆತಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** :– **ಶ್ರೀ. ಎಲ್ ಪಿ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ :–

ಹೇಳಿಕೆಯನ್ನು ಯಾವ ದಿನಾಂಕದಂದು ಯಾರ ಮುಂದೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಅಪಘಾತ ಸ್ಥಳದಲ್ಲಿ ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕ ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕೊಟ್ಟಗಾರಹಳ್ಳಿ ಮತ್ತು

ಜಾಲಮಂಗಲಕ್ಕೆ ಎಷ್ಟು ದೂರ ಇದೆ ಎಂದರೆ ಸಾಕ್ಷಿ 2 ಕಿ.ಮೀ. ಎಂದು ನುಡಿಯುತ್ತಾರೆ. ನೀವು ಬಸ್ ಅನ್ನು ಸುಮಾರು ಎಷ್ಟು ದೂರದಿಂದ ನೋಡಿರುತ್ತೀರಿ ಎಂದರೆ ಸಾಕ್ಷಿ 15–20 ಮಾರು ದೂರದಿಂದ ಎಂದು ನುಡಿಯತ್ತಾರೆ. ಮೃತ ವ್ಯಕ್ತಿಯನ್ನು ನೀವು ಎಷ್ಟು ದೂರದಿಂದ ನೋಡಿರುತ್ತೀರಿ ಎಂದರೆ ಸಾಕ್ಷಿ ನಾವು ದೇವಸ್ಥಾನದ ಬಳಿ ಕೂತಿದ್ದಾಗ ಪೂಜೆ ಮಾಡಿಸಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನೀವು ವಾಕಿಂಗ್ ಮಾಡುತ್ತಿದ್ದಿರೋ ಅಥವಾ ದೇವಸ್ಥಾನದಲ್ಲಿ ಕೂತಿದ್ದಿರೋ ಎಂದರೆ ಸಾಕ್ಷಿ ಅವರು ಹೊರಟಾಗ ಅವರ ಹಿಂದೆ ನಾನು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ವಾಕಿಂಗ್ ಮಾಡುವಾಗ ನಿಮ್ಮ ಜೊತೆ ಯಾರಾದರೂ ಇದ್ದಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬಸ್ಸು ಎಷ್ಟು ಕಿ.ಮೀ. ವೇಗದಲ್ಲಿ ಬರುತ್ತಿತ್ತು ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮೃತ ವ್ಯಕ್ತಿಯು ತಮ್ಮ ದ್ವಿಚಕ್ರ ವಾಹನವನ್ನು ಎಷ್ಟು ಕಿ.ಮೀ. ವೇಗದಲ್ಲಿ ಹೋಗುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಹೆಲ್ಮೆಟ್ ಧರಿಸಿದ್ದರ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಬಿದ್ದಾಗ ಹೆಲ್ಮೆಟ್ ಇತ್ತೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಜನ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ 10–15 ಜನ ಎಂದು ನುಡಿಯುತ್ತಾರೆ.ಬಸ್ಸಿನಲ್ಲಿ ಅಂದಾಜು 20–25 ಜನ ಇದ್ದಿದ್ದರ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನೇರ ರಸ್ತೆ ಇರುವುದರಿಂದ ಬರುವುದು ಮತ್ತು ಹೋಗುವುದು ಕಾಣುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಪಘಾತವು ಕೊಟ್ಟಗಾರಹಳ್ಳಿ ಗ್ರಾಮದ ಸಮೀಪ ನಡೆದಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಗ್ರಾಮಗಳಲ್ಲಿ ಹೋಗುವಾಗ ಬಸ್ಸು ನಿದಾನವಾಗಿ ಚಲಿಸುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯ

ತಪ್ಪಿನಿಂದ ಅಪಘಾವಾಗಿರುವುದಿಲ್ಲ ಮೃತ ವ್ಯಕ್ತಿಯೇ ಹೆಲ್ಮೆಟ್ ಧರಿಸದೆ ಬಸ್ಸಿಗೆ ಡಿಕ್ಕಿ ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಯಾವುದೇ ವಿಚಾರ ಸರಿಯಾಗಿ ಗೊತ್ತಿರುವುದಿಲ್ಲ ಆರೋಪಿಯ ತಪ್ಪು ಇರದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**